**ಪ್ರಧಾನ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಭಟ್ಕಳ**

**ಸಿಸಿ ನಂಬರಃ1564/2022**

**ಸಾಕ್ಷಿಃ ಸಿಡಬ್ಲ್ಯೂಃ4, ಪಿ.ಡಬ್ಲ್ಯೂಃ 3**

ಸಾಕ್ಷಿದಾರನ/ಳ ಹೆಸರು : ಮೊಹಮದ್ ಸಮೀರ್

ತಂದೆಯ/ಗಂಡನ ಹೆಸರು :ಅಬ್ದುಲ ಸಲಾಂ ಶಾಬಂದ್ರಿ

ವಯಸ್ಸು : 43 ವರ್ಷ

ಉದ್ಯೋಗ : ಕಟ್ಟಡ ನಿರ್ಮಾಣದ ಕೆಲಸ

ವಾಸ್ತವ್ಯ : ರಂಗಿನ ಕಟ್ಟಾ,ಹುರುಳಿಸಾಲ, ಭಟ್ಕಳ

**ಸತ್ಯ ಪ್ರತಿಜ್ಞೆಯ ಮೇರೆಗೆ, ತಾಃ20/07/2023**

**ಮುಖ್ಯ ವಿಚಾರಣೆ : ಎಪಿಪಿಯವರಿಂದ,**

ದಿಃ 13.11.2021ರಂದು ನನ್ನ ಹೆಂಡತಿಯ ತಂಗಿಯಾದ ಚಾಸಾ-1ರವರ ಮನೆಯಲ್ಲಿ ಕಳ್ಳತನ ಆಗಿತ್ತು. ಚಾಸಾ-1ರವರ ಮನೆಯು ರಂಗಿನಕಟ್ಟಾ ಹಿಂದೆ ಇರುವ ಮಿಲ್ಲಿನ ಬಳಿ ಸಲ್ಮಾನಾ ಬಾದದಲ್ಲಿರುತ್ತದೆ. ಆ ದಿನ ರಾತ್ರಿ ಕಳ್ಳತನ ಆಗಿದ್ದು ಚಾಸಾ-1ರವರು ನಮ್ಮ ಮನೆಯಿಂದ ಬೆಳಿಗ್ಗೆ ಅವರ ಮನೆಗೆ ಹೋಗಿ ನೋಡಿದಾಗ ಕಳ್ಳತನ ಆದ ವಿಷಯ ಅವಅರಿಗ ತಿಳಿದಿರುತ್ತದೆ. ಚಾಸಾ-1ರವರ ಮನೆಯಿಂದ ಒಂದು ಬ್ರೆಸಲೇಟ , 2 ಉಂಗುರಗಳು, 1 ಜೊತೆ ಕಿವಿಯೋಲೆಗಳು ಕಳ್ಳತನವಾಗಿರುತ್ತವೆ. ಒಟ್ಟು ಒಂದು ಲಕ್ಷ ಐವತ್ತು ಸಾವಿರ ರೂ. ಮೌಲ್ಯದ ಚಿನ್ನಾಭರಣ ಕಳ್ಳತನ ಆಗಿರುತ್ತದೆ.

**ಪಾಟೀ ಸವಾಲು : ಆರೋಪಿ ಪರ ಶ್ರೀ ವಿ ಎಫ್ ಜಿ ವಕೀಲರಿಂದ,**

ಪೊಲೀಸರು ಆರೋಪಿತನನ್ನು ತೋರಿಸಿ ಇತನೇ ನಿಮ್ಮ ಹೆಂಡತಿಯ ತಂಗಿ ಮನೆಯಲ್ಲಿ ಕಳ್ಳತನ ಮಾಡಿರುತ್ತಾನೆಂದು ಹೇಳಿದರ ಮೇರೆಗೆ ನನಗೆ ಗೊತ್ತಾಗಿರುತ್ತದೆ. ಆರೋಪಿತನಿಗೂ ಕಳ್ಳತನಕ್ಕೂ ಯಾವದೇ ಸಂಬಂಧ ಇರುವುದಿಲ್ಲವೆಂದರೆ ಸರಿಯಲ್ಲ. ಆರೋಪಿತನ ಬಳಿಯಿಂದ ಯಾವದೇ ಚಿನ್ನಾಭರಣಗಳನ್ನು ವಶಪಡಿಸಿಕೊಂಡಿರುವುದಿಲ್ಲವೆಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ**

**(ನನ್ನ ಹೇಳಿಕೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು )**

**ಓ.ಹೇ.ಕೇ. ಸರಿ ಇದೆ .**

**ಸಹಿ ಇದೆ**

**ಪ್ರ.ದ.ನ್ಯಾ.ದಂ., ಭಟ್ಕಳ.**